

ಇಲ್ಲಿ ಬರೆದಿದ್ದು ಕಥೆಯಲ್ಲ. ಒಮ್ಮೊಮ್ಮೆ ವಾಸ್ತವಿಕತೆ, ಕಥೆಗಿಂತಲೂ ಹೆಚ್ಚು ವಿಸ್ಮಯವಾಗಿರುತ್ತದೆ. ಟೇಪಚೂ ಬಗ್ಗೆ ತಿಳಿದ ನಂತರ ನಿಮಗೂ ಸಹ ಹೀಗನ್ನಿಸುವುದು.

ನಾನು ಟೇಪಚೂನನ್ನು ತುಂಬಾ ಸಮೀಪದಿಂದ ಬಲ್ಲೆ. ನಮ್ಮ ಹಳ್ಳಿ ಮಡರ್, ಸೋನ್ ನದಿಯ ದಡದಲ್ಲಿ ಒಂದೆರಡು ಫರ್ಲಾಂಗ್ ಅಂತರದಲ್ಲಿದೆ. ಎರಡನೆಯದಾಗಿ, ದೂರ ಮತ್ತೂ ಕಡಿಮೆಯಿರಬಹುದು; ಕಾರಣ, ಹಳ್ಳಿಯ ಹೆಂಗಸರು ಬೆಳಗ್ಗೆ ಹೊಲಗಳಿಗೆ ಹೋಗುವುದಕ್ಕೂ ಮೊದಲು ಮತ್ತು ಸಂಜೆ ಅಲ್ಲಿಂದ ಮರಳಿ ಬಂದ ನಂತರ ಸೋನ್ ನದಿಯಿಂದಲೇ ಮನೆಯ ಕೆಲಸ-ಕಾರ್ಯಗಳಿಗೆ ನೀರನ್ನು ತುಂಬುತ್ತಾರೆ. ನಾನೆಂದೂ ಈ ಹೆಂಗಸರು ದಣಿದಿದ್ದನ್ನು ನೋಡಿಲ್ಲ. ಅವರು ಸದಾ ಕೆಲಸವನ್ನು ಮಾಡುತ್ತಲೇ ಇರುತ್ತಾರೆ.

ಹಳ್ಳಿಯ ಜನ ಸೋನ್ ನದಿಯಲ್ಲಿಯೇ ಮುಳುಗೆದ್ದು ಸ್ನಾನ ಮಾಡುತ್ತಾರೆ. ಮುಳುಗು ಹಾಕಲು ಯೋಗ್ಯವಾದ ನೀರನ್ನು ಆಳಗೊಳಿಸಲು ನದಿಯ ಒಳಗೆ ಚಿಕ್ಕ ಬಾವಿಯನ್ನು ತೋಡಬೇಕಾಗುತ್ತದೆ. ನದಿಯ ಹರಿಯುವ ಧಾರೆಯ ಕೆಳಗೆ, ಮರಳನ್ನು ಬೊಗಸೆಗಳಿಂದ ಸರಿಸಿದಾಗ ಚಿಕ್ಕ ಬಾವಿಗಳು ಆಗುತ್ತವೆ. ಬೇಸಿಗೆಯ ದಿನಗಳಲ್ಲಿ ಸೋನ್ ನದಿಯ ನೀರು ತುಂಬಾ ಕಡಿಮೆಯಾಗುತ್ತದೆ, ಆಗ ಅಲ್ಲಿ ಚಿಕ್ಕ ಬಾವಿಯನ್ನು ತೋಡದಿದ್ದರೆ, ಮನುಷ್ಯನ ಮುಂಡವೇ ಒದ್ದೆಯಾಗುವುದಿಲ್ಲ. ಇದೇ ಸೋನ್ ನದಿ ಬಿಹಾರವನ್ನು ತಲುಪುವಷ್ಟರಲ್ಲಿ ಎಷ್ಟು ವಿಶಾಲವಾಗಿ ಹರಿಯುತ್ತಾಳೆ ಎಂಬುದನ್ನು ನೀವು ನಮ್ಮ ಹಳ್ಳಿಯ ಅಂಚಿನಲ್ಲಿ ನಿಂತು ನೋಡಲಾಗದು.

ನಮ್ಮ ಹಳ್ಳಿಯಲ್ಲಿ ಹತ್ತು-ಹನ್ನೊಂದು ವರ್ಷಗಳ ಹಿಂದೆ ಅಬ್ಬಿ ಎಂಬ ಒಬ್ಬ ಮುಸಲ್ಮಾನನಿದ್ದ. ಹಳ್ಳಿಯ ಹೊರಗೆ ಚಮ್ಮಾರರ ಮನೆಗಳಿದ್ದು, ಅದಕ್ಕೆ ಸ್ವಲ್ಪ ದೂರದಲ್ಲಿ ಮೂರ್ನಾಲ್ಕು ಮುಸಲ್ಮಾನರ ಮನೆಗಳಿದ್ದವು. ಮುಸಲ್ಮಾನರು ಕೋಳಿ ಮತ್ತು ಕುರಿಗಳನ್ನು ಸಾಕುತ್ತಿದ್ದರು. ಜನ ಅವರನ್ನು 'ಚಿಕವಾ' ಅಥವಾ 'ಕಟುಆ' ಎನ್ನುತ್ತಿದ್ದರು. ಅವರು ಕುರಿ ಮಾಂಸದ ವ್ಯಾಪಾರವನ್ನು ಸಹ ಮಾಡುತ್ತಿದ್ದರು. ಅವರ ಬಳಿ ಅಲ್ಪ-ಸ್ವಲ್ಪ ಜಮೀನೂ ಸಹ ಇರುತ್ತಿತ್ತು.

ಅಬ್ಬಿ ಅಲೆಮಾರಿಯಾಗಿದ್ದು, ಸ್ವೇಚ್ಛಾಚಾರಿಯಾಗಿದ್ದ. ಅವನು ಎರಡೆರಡು ಹೆಣ್ಣುಗಳನ್ನು ಮದುವೆಯಾಗಿದ್ದ. ನಂತರದಲ್ಲಿ ತುಂಬಾ ಸುಂದರಿಯಾಗಿದ್ದ ಹೆಂಡತಿಯೊಬ್ಬಳು, ಹಳ್ಳಿಯ ದರ್ಜಿಯ ಮನೆಗೆ ಹೋಗಿ ಕೂತಳು. ಅಬ್ಬಿ ದುಃಖಿಸಲಿಲ್ಲ. ಪಂಚಾಯಿತಿ ಹೇಳಿದಷ್ಟು ಹಣವನ್ನು ದರ್ಜಿ ಭರಿಸಿದ. ಅಬ್ಬಿ ಆ ಹಣದಿಂದ ಕೆಲವು ದಿನಗಳ ಕಾಲ ಮಜಾ ಮಾಡಿದ. ನಂತರ ಒಂದು ಹಾರ್ಮೋನಿಯಂ ಖರೀದಿಸಿ ತಂದ. ಅಬ್ಬಿ ಪೇಟೆಗೆ ಹೋಗುವಾಗ, ಆ ದರ್ಜಿಯ ಮನೆಯೆದುರು ನಿಲ್ಲುತ್ತಿದ್ದ. ಅಲ್ಲಿ ಊಟ ಮಾಡುತ್ತಿದ್ದ, ಮೋಜು ಮಾಡುತ್ತಿದ್ದ, ತನ್ನ ಹಳೆಯ ಹೆಂಡತಿಗೆ ಪುಸಲಾಯಿಸಿ ಅಲ್ಪ-ಸ್ವಲ್ಪ ಹಣವನ್ನು ಲಪಟಾಯಿಸಿ, ಅದರಿಂದ ಕೆಲವು ಸಾಮಾನುಗಳನ್ನು ಖರೀದಿಸಿ ಮನೆಗೆ ಬರುತ್ತಿದ್ದ.

ಅಬ್ಬಿ ಸುಂದರನಾಗಿದ್ದನೆಂದು ಹೇಳುತ್ತಾರೆ. ಅವನ ಮುಖದಲ್ಲಿ ಕಾಂತಿಯಿತ್ತು. ಸಣಕಲನಾಗಿದ್ದ ಅವನು ಬಾಲ್ಯದಲ್ಲಿ ಖಾಯಿಲೆ ಬಿದ್ದು, ನಂತರದಲ್ಲಿ ಅವನ ಆಹಾರ ನಿಯಮಿತವಾಗಿರಲಿಲ್ಲ; ಹೀಗಾಗಿ ಅವನ ಮೈಬಣ್ಣ ತೆಳು ಅರಿಶಿನದಂತಿತ್ತು. ಅವನು ಬಿಳಿಯವನಂತೆ ಕಾಣುತ್ತಿದ್ದ. ಅವನ ಶರೀರಕ್ಕೆ ಎಂದೂ ಬಿಸಿಲು ಬಿದ್ದಿರಲಿಲ್ಲವೆಂದು ತೋರುತ್ತಿತ್ತು. ಅಂಧಕಾರದಲ್ಲಿ, ಬಿಸಿಲು ಮತ್ತು ಗಾಳಿಯಿಂದ ದೂರ ಬೆಳೆಯುವ ಗೋಧಿಯ ಹಳದಿ ಗಿಡದಂತೆ ಅವನ ಬಣ್ಣವಿತ್ತು. ಆದಾಗ್ಯೂ, ಅವನಲ್ಲಿ ಅದೇನು ಗುಣವಿತ್ತೋ, ಹೆಣ್ಣು ಮಕ್ಕಳು ಅವನನ್ನು ನೋಡಿ ಮರುಳಾಗುತ್ತಿದ್ದರು. ಬಹುಶಃ ದೂರದ ನಗರದಲ್ಲಿನ ಫ್ಯಾಶನ್ ಮೊಟ್ಟ ಮೊದಲು ಹಳ್ಳಿಗೆ ಅವನ ಮೂಲಕವೇ